ಪದಬಂಧ



**ಎಡದಿಂದ ಬಲಕ್ಕೆ:**

1. ಕಂಡ ಕಂಡೆಲ್ಲ ಅಡವಿಗಳಿಗೆ ಒದಗಿ ಬಂದಿದೆ ಅಂತ್ಯದ ಸಮಯ 4
3. ಸಂಪು ಹೂಡಿದವರ ಪಕ್ಕದಲ್ಲೇ ಇದ್ದು ಸಂಬಂಧ ಸಾಧಿಸಿದ 3
4. ಹಳ್ಳಿ ಜೀವನ ಕುರಿತು ವಿವರಿಸಿದ್ದರಲ್ಲಿ ಕಿಂಚಿತ್ತೂ ಹೊಸದಿಲ್ಲ ಬಿಡಿ 3
6. ಶತ ವರ್ಷ ಬದುಕಲು ನೆರವಾದೀತೇ ಈ ಔಷಧೀಯ ಸಸ್ಯ? 4
7. ಹಾನಿಯಾದದ್ದನ್ನು ಸರಿಪಡಿಸಲು ಕೊಲೆ ಮಾಡುವುದೇ? 3
9. ಗುಂಡೇಟಿಗೂ ಹೆದರದಂಥ ಧೈರ್ಯ ಆತನಿಗಿದೆ 3
11. ಹಕ್ಕು ಚಲಾಯಿಸಲು ಬಂದವರ ಬಗೆಗೆ ವ್ಯಂಗ್ಯ ಆಡುವುದೇ? 3
13. ಪಟ್ಟದಕಲ್ಲಿನ ಚಿತ್ರಗಳನ್ನು ಕಳುಹಲು ಅಂಚೆಯೇ ಸರಿ 3
15. ಪಾತರಗಿತ್ತಿಗಳನ್ನು ಕುರಿತ ವಿಷಯಗಳಲ್ಲಿ ಆತ ಭಾರೀ ವಿದ್ವಾಂಸ 4
17. ಶ್ರೇಷ್ಠ ತರ್ಜುಮೆಗಾರರಿಗೆಲ್ಲ ನೀಡಿದ ಬಹುಮಾನ ಬೆಳ್ಳಿ 3
18. ವೆಂಕಣ್ಣ ಕಡೆಗೂ ಒಬ್ಬ ವ್ಯಾಪಾರಿಯಾದ 3
19. ಆತನ ಕೈಯಲ್ಲಿ ಕಂಡದ್ದು ಎಂಥ ಸುಂದರ ಭರಣಿ! 4

**ಮೇಲಿಂದ ಕೆಳಕ್ಕೆ:**

1. ಕಾರ್ಕೋಟಕ ವಿಷದ ವಿವರಣೆಯ ಧ್ವನಿ ಕಿವಿಗೆ ಚುಚ್ಚುವಂತಿದೆ 3
2. ಹೊಲ ಕೇರಿ ಎಲ್ಲೆಲ್ಲೂ ಒಲವಿನದೇ ಅಲೆ ಅಲೆ 3
3. ಸಾಧ್ಯವಿದ್ದದ್ದನ್ನೆಲ್ಲ ಸರಿಪಡಿಸಿದ ನಂತರವಷ್ಟೇ ರಾಜಿಯಾದೀತು 3
5. ದೂರದಿಂದಲೇ ಕಂಡಿತ್ತು ಸೇನೆಯ ಒಂದು ಭಾಗ 3
7. ಕುರುಹು ತಿಳಿಯದಂತೆ ಮಾಡಲು ಧರಿಸಿದ್ದು ಚಿಂದಿ ವಸ್ತ್ರ 3
8. ಕ್ರೂರ ಕರ್ಮಗಳನ್ನು ಮಾಡಿದವರಿಗೆ ಕ್ರೂರ ಶಿಕ್ಷೆಗಳ ಲೋಕ 3
9. ಜಗಳಗಂಟರ ನಡುವೆ ಸಹಜ ತಾನೇ ಇಂಥ ಸೆಣಸಾಟ? 3
10. ಗದ್ದುಗೆಯಲ್ಲೂ ತುಂಬಿ ತಿಂದುಹಾಕಿದೆ ಕುರುಡು ಕೀಟ 3
12. ಹಾಜರಾಗುವ ಎಲ್ಲರಿಗೂ ಸಾಕಾಗುವ ವಿಶಾಲ ಮೊಗಸಾಲೆ 3
14. ಕಪ್ಪನೆಯ ಬಣ್ಣದ್ದಾದರೂ ಸಿಹಿಯಾದ ಪೇಯ 3
15. ಪಿತೃ ಕಾರ್ಯ ಕೈ ಬಿಡುವುದು ಭಾರೀ ಪಾಪದ ಕೆಲಸ 3
16. ವೇತನ ಕೈ ಸೇರುವವರೆಗೂ ಆತನಿಗೆ ಎಂಥ ಅವಸರ! 3

---

**11–06–2020 ಉತ್ತರಗಳು**

ಎಡದಿಂದ ಬಲಕ್ಕೆ:

1. ಉದ್ಭವ 3. ಪ್ರಮಾದ 4. ದಹಿಸು 6. ಯೌವ್ವನ 7. ಪ್ರಚಾರಕ 9. ವನವಾಸಿ 11. ನಡುದಾರಿ 13. ನದೀತಟ 15. ಸಫಲ 17. ವರ್ಜಿತ 18. ವಂತಿಗೆ 19. ತರಂಗ

ಮೇಲಿಂದ ಕೆಳಕ್ಕೆ:

1. ಉದಯ 2. ವದನ 3. ಪ್ರಹಾರ 5. ಸುಮ್ಮಾನ 7. ಪ್ರಸಾಧನ 8. ಕಳ್ಳದಾರಿ 9. ವರ್ಧಮಾನ 10. ಸಿಡುಕಾಟ 12. ದಾನವ 14. ದೀವಿಗೆ 15. ಸತತ 16. ಲವಂಗ

ಪ್ರಶ್ನಾ ಲಂಕಣ

# ಟಿಯೊಟಿವಕಾನ್: ಅದೇನು?

ಟಿಯೊಟಿವಕಾನ್ ಅದೊಂದು ವಿಶ್ವ ಪ್ರಸಿದ್ಧ ಪ್ರಾಚೀನ ನಗರ. ಅವಶೇಷಗಳ ರೂಪದಲ್ಲಷ್ಟೇ ಅದರ ಪ್ರಸ್ತುತ ಅಸ್ತಿತ್ವ. ಉತ್ತರ ಅಮೆರಿಕ ಖಂಡದ ಮೆಕ್ಸಿಕೊ ರಾಷ್ಟ್ರದಲ್ಲಿರುವ ಈ ನಗರ ನಿರ್ಮಾಣಗೊಂಡದ್ದು ಈಗ್ಗೆ ಸುಮಾರು 2,500 ವರ್ಷ ಹಿಂದೆ. ವೈಭವದಿಂದ ಮೆರೆದು, ಕಡೆಗೆ ಹಾಳುಬಿದ್ದು ವೃಷ್ಟಿವನಗಳಲ್ಲಿ ಅಡಗಿಹೋಗಿದ್ದ ಈ ನಗರ ಕ್ರಿ.ಶ. 1400 ರಲ್ಲಿ 'ಎಜ್ಟೆಕ್' ಜನರಿಂದ ಪ್ರಥಮವಾಗಿ ಪತ್ತೆಯಾಯಿತು. ಈ ನಗರಕ್ಕೆ 'ಟಿಯೊಟಿವಕಾನ್' ಎಂದು ಹೆಸರನ್ನಿಟ್ಟವರೂ ಅವರೇ. ಆ ಜನರ ಭಾಷೆಯಲ್ಲಿ ಟಿಯೊಟಿವಕಾನ್ ಎಂದರೆ 'ದೇವರು ಸೃಷ್ಟಿಗೊಂಡ ಸ್ಥಳ' ಎಂದರ್ಥ! ಮೂಲತಃ ಈ ನಗರವನ್ನು ನಿರ್ಮಿಸಿದ ಜನ, ಅವರ ಇತಿಹಾಸ, ಅವರ ಸಂಸ್ಕೃತಿ ಇತ್ಯಾದಿ ಯಾವ ವಿವರಗಳೂ ಸ್ಪಷ್ಟವಾಗಿ ಈವರೆಗೂ ತಿಳಿದಿಲ್ಲ!

'ಟಿಯೊಟಿವಕಾನ್' ಎಂಬ ಹೆಸರಿಗೆ ಪ್ರೇರಣೆ ನೀಡಿದ್ದು ಆ ನಗರದಲ್ಲಿದ್ದ ಬೃಹತ್ ಪಿರಮಿಡ್‌ಗಳು ಮತ್ತು ದೇವಾಲಯಗಳು. ಟಿಯೊಟಿವಕಾನ್ ನಗರದ್ದು ಇಪ್ಪತ್ತು ಚದರ ಕಿ.ಮೀ ವಿಸ್ತಾರ; ಅಚ್ಚುಕಟ್ಟಾದ ಅಡ್ಡ ಮತ್ತು ನೀಟ ರಸ್ತೆಗಳ ವಿನ್ಯಾಸ. ಆ ರಸ್ತೆಗಳಿಗೆ ಹೊಂದಿದಂತೆ 2,000 ಕ್ಕೂ ಅಧಿಕ ಮನೆಗಳು. ನಗರದ ನಡುವೆ ಉತ್ತರದಿಂದ ದಕ್ಷಿಣಕ್ಕೆ 40 ಮೀಟರ್ ಅಗಲದ, 2.4 ಕಿ.ಮೀ ಉದ್ದದ ಒಂದು ಹೆದ್ದಾರಿ. ಆ ಹೆದ್ದಾರಿಗೆ ಹೊಂದಿಕೊಂಡಂತೆಯೇ ಅರಸನ ನಿವಾಸ, ಪ್ರಮುಖ ವ್ಯಕ್ತಿಗಳ ಮನೆಗಳು, ಪಿರಮಿಡ್ ಗಳು ಹಾಗೂ ದೇಗುಲಗಳು. 'ಮೃತರ ಮಾರ್ಗ' (ದಿ ಅವೆನ್ಯೂ ಆಫ್ ದಿ ಡೆಡ್) ಎಂಬ ಹೆಸರಿನ ಈ ಮಹಾ ಮಾರ್ಗದ ಉತ್ತರದ ತುದಿಯಲ್ಲಿ 'ಚಂದ್ರನ ಗೋಪುರ' (ದಿ ಪಿರಮಿಡ್ ಆಫ್ ದಿ ಮೂನ್) ಎಂಬೊಂದು ದೈತ್ಯ ಪಿರಮಿಡ್ (ಚಿತ್ರ 2). ಅದರ ಪಾದದ ಉದ್ದ 156 ಮೀ; ಅಗಲ 130 ಮೀ. ಎತ್ತರ 43 ಮೀ. ಅಲ್ಲಿಂದ ಅರ್ಧ ಕಿ.ಮೀ ದೂರದಲ್ಲಿ 230 ಮೀ ಉದ್ದ, 220 ಮೀ ಅಗಲ ಪಾದದ, 66 ಮೀ ಎತ್ತರದ 'ಸೂರ್ಯನ ಗೋಪುರ' (ದಿ ಪಿರಮಿಡ್ ಆಫ್ ದಿ ಸನ್) ಎಂಬ ಹೆಸರಿನ ಬಹು ದೈತ್ಯ ಗೋಪುರ ಶಿಲ್ಪ(ಚಿತ್ರ 1). 'ಮೃತರ ಮಾರ್ಗ'ದ ದಕ್ಷಿಣದ ತುದಿಯಲ್ಲಿ ಪಕ್ಷಿ ಗರಿ ಸಹಿತ ಸರ್ಪ ರೂಪದ 'ಕೆಟ್ ಸಾಲ್ ಕೋಹ್ ಟ್ಲ್' ದೇವರ ಭಾರೀ ದೇವಾಲಯ.

ಪುರಾತತ್ವ ವಿಜ್ಞಾನಿಗಳ ಪ್ರಕಾರ ಟಿಯೊಟಿವಕಾನ್ ನಗರದ ನಿರ್ಮಾಣ ಆರಂಭಗೊಂಡದ್ದು ಕ್ರಿ.ಪೂ. 400ರಲ್ಲಿ. ಅಲ್ಲಿಂದ ಮುಂದೆ 700 ವರ್ಷಗಳ ಅವಧಿಯಲ್ಲಿ ಪೂರ್ಣಗೊಂಡ ಆ ಮಹಾ ನಗರದ ಜನ ಸಂಖ್ಯೆ 2 ಲಕ್ಷ. ಪ್ರಾಣಿ ಬಲಿ ಮತ್ತು ಭಾರೀ ಸಂಖ್ಯೆಯ ನರಬಲಿಗಳನ್ನು ನೀಡುವ ಕ್ರೂರ ಧಾರ್ಮಿಕ ಸಂಪ್ರದಾಯಗಳನ್ನು ಜಾರಿಗೆ ತಂದಿದ್ದ ಪ್ರಬಲ ಪೂಜಾರಿಗಳದ್ದೇ ಅಲ್ಲಿನ ಪ್ರಧಾನ ಆಡಳಿತ. ವಾಸ್ತವವಾಗಿ ಅಲ್ಲಿನ ಪಿರಮಿಡ್‌ಗಳೆಲ್ಲ 'ನರಬಲಿಯ ಪೀಠ'ಗಳೇ ಆಗಿದ್ದುವು! ವಿಪರ್ಯಾಸ ಏನೆಂದರೆ, ದೀರ್ಘಕಾಲದ ದುರಾಡಳಿತದಿಂದ ಬೇಸತ್ತ ಅಲ್ಲಿನ ಮುಗ್ಧ ಶ್ರಮಿಕ ಜನ ಕ್ರಿ.ಶ. 600ರ ಸುಮಾರಿಗೆ ಏಕೋ ಏನೋ, ಇದ್ದಕ್ಕಿದ್ದಂತೆ ದಂಗೆ ಎದ್ದರು. ಪೂಜಾರಿಗಳನ್ನೆಲ್ಲ ಬಡಿದು ಕೊಂದು, ಕಟ್ಟಡಗಳನ್ನೆಲ್ಲ ಭಗ್ನಗೊಳಿಸಿ, ನಗರವನ್ನು ತೊರೆದು ದೂರ ದೂರ ಚದುರಿಹೋದರು. ಟಿಯೊಟಿವಕಾನ್‌ನ ಅಂತ್ಯ ಹೀಗೆ ಅದೊಂದು ನಿಗೂಢ ಮಹಾದುರಂತ!




■ ಎನ್. ವಾಸುದೇವ್